ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 71
2. ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 07/12/2020
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕಾರ್ಮಿಕ ಕಲ್ಯಾಣ ನಿಧಿಗೆ ನೋಂದಾಯಿಸುವಲ್ಲಿ ಕಟ್ಟಡ ಕಾರ್ಮಿಕರೆಂದು ವರ್ಗೀಕರಣದಲ್ಲಿ ಮೇಸನರಿ, ಬಡಗಿ ಪ್ಲಂಬರ್ ಇತರರನ್ನು ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇವರನ್ನು ನೋಂದಣಿ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು ;	ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996 ರ ಕಲಂ 2(ಡಿ) ರನ್ವಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿರುವ ಎಲ್ಲಾ ವರ್ಗದ ಕಾರ್ಮಿಕರನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಂಡಳಿಯ ಫಲಾನುಭವಿಗಳಾಗಿ ನೋಂದಾಯಿಸಲಾಗುತ್ತಿದೆ. ಮೇಸನರಿ, ಬಡಗಿ, ಪ್ಲಂಬರ್ ಗಳನ್ನು ಒಳಗೊಂಡಂತೆ ನಿರ್ಮಾಣ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಕಾರ್ಮಿಕರನ್ನು ಯಾವುದೇ ವರ್ಗೀಕರಣವಿಲ್ಲದೇ ನೋಂದಾಯಿಸಲಾಗಿರುತ್ತದೆ. ಕಾರ್ಮಿಕ ಇಲಾಖೆಯ ಎಲ್ಲಾ ಕಾರ್ಮಿಕ ನಿರೀಕ್ಷಕರು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರನ್ನು ನೋಂದಣಾಧಿಕಾರಿಗಳಾಗಿ ಸರ್ಕಾರದಿಂದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ನೋಂದಣಿಗಾಗಿ ಸೇವಾ ಸಿಂಧು ತಂತ್ರಾಂಶದ ಮೂಲಕ ಸ್ವೀಕರಿಸಲಾಗುವ ಅರ್ಜಿಗಳನ್ನು ಅವರು ಕಾಯ್ದೆಯ ಪ್ರಾವಧಾನಗಳನ್ವಯ ನೋಂದಾಯಿಸಲು ಕ್ರಮ ವಹಿಸುತ್ತಾರೆ.
ಆ)	ಕಳೆದ ಮೂರು ವರ್ಷಗಳಿಂದ ತುಮಕೂರು ಜಿಲ್ಲೆಯಲ್ಲಿ ಕಾರ್ಮಿಕ ಕಲ್ಯಾಣ ನಿಧಿಗೆ ಸ್ಥಳೀಯ ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿ, ಪುರಸಭೆ ಹಾಗೂ ನಗರ ಸಭೆಗಳಿಂದ ಜಮೆಯಾದ ಹಣವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)	ಕಳೆದ ಮೂರು ವರ್ಷದಲ್ಲಿ ತುಮಕೂರು ಜಿಲ್ಲೆಯ ಸ್ಥಳೀಯ ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿ, ಪುರಸಭೆ ಹಾಗೂ ನಗರ ಸಭೆಗಳಿಂದ ಸುಂಕ ರೂಪದಲ್ಲಿ ಮಂಡಳಿಗೆ ಸಂಗ್ರಹವಾಗಿರುವ ಸೆಸ್ ಮೊತ್ತದ ತಾಲ್ಲೂಕುವಾರು ಮಾಹಿತಿಯನ್ನು <u>ಅನುಬಂಧ-01</u> ರಲ್ಲಿ ಲಗತ್ತಿಸಿದೆ
ಇ)	ಈ ಜಿಲ್ಲೆಯಲ್ಲಿ ಕಾರ್ಮಿಕರ ಆರೋಗ್ಯ ವೆಚ್ಚ ಭರಿಸಲು ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)	ತುಮಕೂರು ಜಿಲ್ಲೆಯಲ್ಲಿ ವೈದ್ಯಕೀಯ ಸಹಾಯಧನದಡಿ ಸ್ವೀಕರಿಸಲಾದ ಅರ್ಜಿಗಳ ವಿವರವನ್ನು <u>ಅನುಬಂಧ-02</u> ರಲ್ಲಿ ಲಗತ್ತಿಸಿದೆ.
ಈ)	ಮಂಜೂರಾಗದೇ ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಅದಕ್ಕೆ ಕಾರಣಗಳೇನು ?	ಮಂಜೂರಾತಿಗಾಗಿ 25 ಅರ್ಜಿಗಳು ಬಾಕಿ ಉಳಿದಿದ್ದು, ಸದರಿ ಅರ್ಜಿಗಳು ವೈದ್ಯಕೀಯ ಧನಸಹಾಯದ ಅರ್ಜಿಗಳಾಗಿದ್ದು, ಸಂಬಂಧಿಸಿದ ಕಾರ್ಮಿಕ ಅಧಿಕಾರಿಗಳು ಸದರಿ ಅರ್ಜಿಗಳಲ್ಲಿ ಕೋರಿರುವ ಸಹಾಯ ಧನದ ಮೊತ್ತವನ್ನು ಸಿ.ಜಿ.ಹೆಚ್.ಎಸ್ ದರಗಳಂತೆ ಪರಿಶೀಲಿಸಿ ನಿಗಧಿಪಡಿಸಿ ಮಂಜೂರು ಮಾಡಲು ಕ್ರಮ ಕೈಗೊಳ್ಳುತ್ತಿರುತ್ತಾರೆ.

ಕಾಇ 391 ಎಲ್‌ಇಟಿ 2020

(ಅರಬೈಲ್ ಶಿವರಾಂ ಹೆಬ್ಬಾರ್)
ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಅನುಬಂಧ-01

ಕಳೆದ ಮೂರು ವರ್ಷಗಳಿಂದ ತುಮಕೂರು ಜಿಲ್ಲೆಯ ಸ್ಥಳೀಯ ಗ್ರಾಮ ಪಂಚಾಯಿತಿಗಳಿಂದ ಸಂಗ್ರಹವಾದ ಸುಂಕ ಮೊತ್ತದ ವಿವರ(2017-18 ರಿಂದ 2019-2020)

ಕ್ರ ಸಂ	ತಾಲೂಕುವಾರು ವಿವರ	ಸಂಗ್ರಹವಾದ ಸುಂಕ ಮೊತ್ತ
1	ಚಿಕ್ಕನಾಯಕನಹಳ್ಳಿ	1,54,604/-
2	ಗುಬ್ಬಿ	4,28,903/-
3	ಕೊರಟಗೆರೆ	2,41,614/-
4	ಕುಣಿಗಲ್	2,71,785/-
5	ಮಧುಗಿರಿ	1,06,520/-
6	ಪಾವಗಡ	73,031/-
7	ಶಿರಾ	2,88,643/-
8	ತಿಪಟೂರು	3,54,318/-
9	ತುಮಕೂರು	7,29,450/-
10	ತುರುವೇಕೆರೆ	61,658/-
ಒಟ್ಟು		27,10,526/-

ಕಳೆದ ಮೂರು ವರ್ಷಗಳಿಂದ ತುಮಕೂರು ಜಿಲ್ಲೆಯ ಸ್ಥಳೀಯ ಪಟ್ಟಣ ಪಂಚಾಯಿತಿ, ಪುರಸಭೆ, ಮತ್ತು ನಗರಸಭೆಗಳಿಂದ ಸಂಗ್ರಹವಾದ ಸುಂಕ ಮೊತ್ತದ ವಿವರ(2017-18 ರಿಂದ 2019-2020)

ಕ್ರ ಸಂ	ಪಟ್ಟಣ ಪಂಚಾಯತ್	ಸಂಗ್ರವಾದ ಸುಂಕ ಮೊತ್ತ
1	ಗುಬ್ಬಿ	19,60,872/-
2	ಕೊರಟಗೆರೆ	6,44,269/-
3	ತುರುವೇಕೆರೆ	10,20,725/-
	ಒಟ್ಟು	36,25,866/-

ಕ್ರ ಸಂ	ನಗರಸಭೆ	ಸಂಗ್ರವಾದ ಸುಂಕ ಮೊತ್ತ
1	ಶಿರಾ	42,66,423/-
2	ತಿಪಟೂರು	50,74,838/-
3	ತುಮಕೂರು	2,15,63,387/-
	ಒಟ್ಟು	3,09,04,648/-

ಕ್ರ ಸಂ	ಪುರಸಭೆ	ಸಂಗ್ರವಾದ ಸುಂಕ ಮೊತ್ತ
1	ಚಿಕ್ಕನಾಯಕನಹಳ್ಳಿ	8,09,468/-
2	ಕುಣಿಗಲ್	4,35,680/-
3	ಮಧುಗಿರಿ	9,62,361/-
4	ಪಾವಗಡ	5,21,594/-
	ಒಟ್ಟು	27,29,103/-

ಅನುಬಂಧ-2

ಕಳೆದ ಮೂರು ವರ್ಷಗಳಲ್ಲಿ ತಾಲ್ಲೂಕುವಾರು ಸ್ವೀಕರಿಸಲಾದ ವೈಧ್ಯಕೀಯ ಧನಸಹಾಯದ ವಿವರಗಳು

ಕ್ರ.ಸಂ	ತಾಲ್ಲೂಕು	ವೈಧ್ಯಕೀಯ ಸಹಾಯಧನ ಸೌಲಭ್ಯದಡಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ
01	ತುಮಕೂರು	86
02	ಗುಬ್ಬಿ	09
03	ಚಿಕ್ಕನಾಯಕನ ಹಳ್ಳಿ	01
04	ತುರುವೇಕೆರೆ	08
05	ತಿಪಟೂರು	01
06	ಶಿರಾ	18
07	ಮಧುಗಿರಿ	16
08	ಕೊರಟಗೆರೆ	01
09	ಪಾವಗಡ	25
10	ಕುಣಿಗಲ್	37
ಒಟ್ಟು		205